ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 2, May-June 2026, Pp. 177-182
Bi-Monthly, Peer-Reviewed, Open Access, Indexed Journal

I S S N: 2583-3510

SIRDF JOURNALS
editor@srujani.in
www.srujani.in

ಜಾನಪದ ಶಿಶುಪ್ರಾಸಗಳ ವೈಶಿಷಷ್ಟ್ಯತೆ

ಸರಸ್ವತಿ ಡಿ. ಎಸ್
ಕನ್ನಡ ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ.ಆರ್.ಪೇಟೆ, ಮಂಡ್ಯಜಿಲ್ಲೆ.

Abstract:

ಈ ಲೇಖನವು ಕನ್ನಡ ಜಾನಪದ ಶಿಶುಪ್ರಾಸಗಳ ವೈಶಿಷ್ಟತೆ, ಸ್ವರೂಪ ಮತ್ತು ಸಾಂಸ್ಕೃತಿಕ ಮಹತ್ವವನ್ನು ವಿಶ್ಲೇಷಿಸುವ ಉದ್ದೇಶವನ್ನು ಹೊಂದಿದೆ. ಶಿಶುಪ್ರಾಸಗಳು ಮಕ್ಕಳ ಮನರಂಜನೆ, ಭಾಷಾ ಕಲಿಕೆ, ಉಚ್ಚಾರಣಾ ಕೌಶಲ್ಯ ಮತ್ತು ಸ್ಮರಣಶಕ್ತಿಯ ವಿಕಾಸಕ್ಕೆ ಸಹಕಾರಿಯಾಗುವ ಜನಪದ ಸಾಹಿತ್ಯದ ಪ್ರಮುಖ ಪ್ರಕಾರಗಳಾಗಿವೆ. ಇವುಗಳಲ್ಲಿ ಪ್ರಾಸ, ಲಯ, ಶಬ್ದಗಳ ಪುನರಾವರ್ತನೆ, ಕಲ್ಪನಾಶಕ್ತಿ ಹಾಗೂ ಹಾಸ್ಯಮಯ ಅಭಿವ್ಯಕ್ತಿಗಳು ವಿಶಿಷ್ಟವಾಗಿ ಕಂಡುಬರುತ್ತವೆ. ತಾಯಂದಿರು ಮತ್ತು ಹಿರಿಯರು ಮಕ್ಕಳನ್ನು ಮಲಗಿಸಲು, ಆಟವಾಡಿಸಲು ಹಾಗೂ ಮನರಂಜಿಸಲು ಶಿಶುಪ್ರಾಸಗಳನ್ನು ಬಳಸುವ ಮೂಲಕ ಮೌಖಿಕ ಪರಂಪರೆಯನ್ನು ತಲೆಮಾರಿನಿಂದ ತಲೆಮಾರಿಗೆ ವರ್ಗಾಯಿಸಿದ್ದಾರೆ. ಒಟ್ಟಾರೆಯಾಗಿ, ಜಾನಪದ ಶಿಶುಪ್ರಾಸಗಳು ಮಕ್ಕಳ ಸರ್ವತೋಮುಖ ಬೆಳವಣಿಗೆಯೊಂದಿಗೆ ಭಾಷೆ, ಸಂಸ್ಕೃತಿ ಮತ್ತು ಜನಪದ ಪರಂಪರೆಯ ಸಂರಕ್ಷಣೆಯಲ್ಲಿಯೂ ಮಹತ್ವದ ಪಾತ್ರ ವಹಿಸುತ್ತವೆ.

Keywords: *ಜಾನಪದ ಸಾಹಿತ್ಯ, ಶಿಶುಪ್ರಾಸಗಳು, ಮಕ್ಕಳ ಮನರಂಜನೆ, ಭಾಷಾ ಬೆಳವಣಿಗೆ, ಮೌಖಿಕ ಪರಂಪರೆ*

ಪೀಠಿಕೆ

ಶಿಷ್ಟ ಸಂಸ್ಕೃತಿಯೊಂದು ರೂಪುಗೊಳ್ಳುವ ಪೂರ್ವದಲ್ಲಿ ಜನಪದ ಸಂಸ್ಕೃತಿಯೇ ಸರ್ವವ್ಯಾಪಿಯಾಗಿ ಜನಜೀವನವನ್ನು ಆವರಿಸಿಕೊಂಡಿತ್ತು. ಶಿಷ್ಟ ಸಂಸ್ಕೃತಿ ಬೆಳವಣಿಗೆಯಾದ ಮೇಲೂ ಜನಪದ ಸಂಸ್ಕೃತಿ ಅದನ್ನು ಪೋಷಿಸುತ್ತಾ ತನ್ನ ಪ್ರಭಾವವನ್ನು ಬೀರುತ್ತಲೇ ಅರ್ಥಪೂರ್ಣವಾದ ಸಂಬಂಧವನ್ನು ಇಟ್ಟುಕೊಂಡೇ ಬಂದಿದೆ. ಶಿಷ್ಟ ಸಾಹಿತ್ಯಕ್ಕೆ ಪ್ರೇರಕ ಶಕ್ತಿಯಾದ ಜನಪದ ಸಾಹಿತ್ಯವು ಕಥೆ, ಗಾದೆ, ಒಗಟು, ಒಡಪು, ಲಾವಣಿ, ಐತಿಹ್ಯ, ಕಾವ್ಯಗೀತೆ, ಮಹಾಕಾವ್ಯ, ಹೀಗೆ ನೂರಾರು ಪ್ರಕಾರಗಳಲ್ಲಿ ಅಭಿವ್ಯಕ್ತಿಗೊಂಡಿದ್ದು ಶಿಶುಗೀತೆ, ಶಿಶುವಾಣಿ, ಮಕ್ಕಳ ಹಾಡು, ಮಕ್ಕಳ ಪದ, ಮೊದಲಾದ ಹೆಸರುಗಳಿಂದ ಕರೆಸಿಕೊಳ್ಳುವ 'ಶಿಶುಪ್ರಾಸ'ವೂ ಕೂಡ ಅಂತಹ ಪ್ರಕಾರಗಳಲ್ಲೊಂದು.

'ಶಿಶುಪ್ರಾಸ' ಎಂಬ ಪದವನ್ನು ಇಂಗ್ಲೀಷಿನ " Nursery Rhymes' ಎಂಬುದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ ಮೊದಲು ಚಾಲ್ತಿಗೆ ತಂದವರು ಡಾ.ಹಾ.ಮಾ. ನಾಯಕರು. ಆಂಗ್ಲಭಾಷೆಯ "Nursery Rhymes' ಗೆ ಸಂವಾದಿಯಾಗಿ ಬಳಕೆಯಾಗುವ ಶಿಶುಪ್ರಾಸಗಳು ಅಮೇರಿಕಾದಲ್ಲಿ "Mother Goose' ಎಂದೇ ಪ್ರಸಿದ್ಧಿ. ಶಿಶುಪ್ರಾಸಗಳನ್ನು ಹದಿನಾಲ್ಕನೆಯ ಶತಮಾನಕ್ಕೂ ಮೊದಲು 'Lullynges' ಮತ್ತು 'Craddll Song' ಎಂದೂ ಕರೆಯಲಾಗುತ್ತಿತ್ತು. ಶಿಶುಪ್ರಾಸಗಳು ಮಕ್ಕಳು

Please cite this article as: *ಸರಸ್ವತಿ, ಡಿ. ಎಸ್. (2026). ಜಾನಪದ ಶಿಶುಪ್ರಾಸಗಳ ವೈಶಿಷಷ್ಟ್ಯತೆ. ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್, 5(2), 177–182*

ಪರಸ್ಪರ ಕಲಿತುಕೊಳ್ಳುವಂತವು. ಜೊತೆಗೆ ತಲೆಮಾರಿನಿಂದ ತಲೆಮಾರಿಗೆ ಹರಿದುಬಂದವುಗಳು. ಸ್ವತಃ ಆಡಲು ತಾಯಿಯ ಮಡಿಲಿನಿಂದ ಕೆಳಗಿಳಿದ ಮಕ್ಕಳು ಮಾತು ಕಲಿಯುವ ಹಂತದಲ್ಲಿ ಮುಗ್ಧ ಕುತೂಹಲದಿಂದ ತಮ್ಮ ಓರಗೆಯವರ ಜೊತೆಗೂಡಿ ಕ್ರೀಡೆ ಗುಂಪಿನ ಸಂದರ್ಭದಲ್ಲಿ ಪ್ರಾಸದ ಕಲಿಕೆಯಲ್ಲಿ ತನ್ನದಾಗಿಸಿಕೊಳ್ಳುತ್ತಾರೆ.

ಪ್ರಾಸಗಳನ್ನು ಮಕ್ಕಳು ತಮ್ಮದೇ ಆದ ಮನೋಭಾವಕ್ಕೆ ಅರ್ಥೈಸಿಕೊಂಡು ತಮ್ಮ ಚಟುವಟಿಕೆಯೊಟ್ಟಿಗೇ ದೀರ್ಘಕಾಲ ನೆನಪಿಟ್ಟುಕೊಂಡು ಗುನುಗುತ್ತಾರೆ. ಈ ಪ್ರಾಸಗಳಲ್ಲಿ ಶಿಶುಪ್ರಾಸಗಳು ಮತ್ತು ಶಾಲಾ ಶಿಶುಪ್ರಾಸಗಳು ಎಂಬ ಎರಡು ವರ್ಗಗಳಿದ್ದು ಇವೆರಡರಲ್ಲಿಯೂ ವಸ್ತು ಮತ್ತು ಗುಣಲಕ್ಷಣಗಳಲ್ಲಿ ಸಾಕಷ್ಟು ವ್ಯತ್ಯಾಸವಿದೆ. ಶಿಶುಪ್ರಾಸಗಳು ಸ್ವಾಭಾವಿಕವಾಗಿ ಮಕ್ಕಳಿಂದ ರಚಿತವಾಗಿಲ್ಲ. ಇವು ವಯಸ್ಕರಿಂದ ಮಕ್ಕಳಿಗಾಗಿಯೇ ರಚಿಸಿ ನಂತರ ಮಕ್ಕಳಿಂದ ಮಕ್ಕಳಿಗೆ ಪ್ರಸಾರವಾದವುಗಳು. ಹೀಗೆ ಮಕ್ಕಳು ಗಳಿಸಿಕೊಂಡ ಜ್ಞಾನವನ್ನು ಬೆಳೆಸಿ ತಲೆಮಾರಿನಿಂದ ತಲೆಮಾರಿಗೆ ಮುಂದುವರೆಸುತ್ತಾ ಬಾಲ್ಯಾವಸ್ಥೆಯಲ್ಲಿ ತಮ್ಮದೇ ಆದ ಸಮುದಾಯದಲ್ಲಿ ಕಲಿತ ಆಟಗಳನ್ನಾಡುವಾಗ ಪ್ರಾಸಗಳನ್ನು ಬಳಸುತ್ತಾರೆ. ಇದರಿಂದ ಮಕ್ಕಳ ಮನಸ್ಸಿಗೆ ಮನೋರಂಜನೆಯುಂಟಾಗುವ ಜೊತೆ ಜೊತೆಗೇ ಕೇಳುಗರಿಗೂ ಆಹ್ಲಾದವನ್ನುಂಟು ಮಾಡುತ್ತವೆ.

ಮಕ್ಕಳು ಮಾತು ಕಲಿಯುವ ಹಂತಕ್ಕೆ ಬಂದಾಗ ಅವರ ಮನಸ್ಸಿನಲ್ಲಿ ಮುಗ್ಧ ಕುತೂಹಲ ತುಂಬಿರುತ್ತದೆ. ಅಭಿವ್ಯಕ್ತಿಯ ತೊಡಕು ಅರ್ಥೈಸಲು ಆಗದ ಭಾವುಕತೆಯಲ್ಲಿ ತಮ್ಮ ಓರಗೆಯವರು ಹೇಳುವ ಪ್ರಾಸಗಳನ್ನು ಹೆಚ್ಚು ಕಲಿತು ಹಾಡುತ್ತಾರೆ. ಮಕ್ಕಳು ಕಲಿಕೆಯ ಸಂದರ್ಭದಲ್ಲಿ ತಮ್ಮ ಸ್ನೇಹಿತರೊಂದಿಗೆ ಜೊತೆಗೂಡಿದಾಗ ತಮಗರಿವಿಲ್ಲದೇ ಶಿಶುಪ್ರಾಸಗಳನ್ನು ಹಾಡುತ್ತಾರೆ. "ಟೋಪಿ ಬೇಕೆ ಟೋಪಿ...."ಎನ್ನುವ ಹಾಡು ಆಟದ ಸಮಯದಲ್ಲಿ ಬಳಕೆಯಾಗುವ ಪ್ರಾಸಪದವಾಗಿದೆ.

ತಾಯಿಯ ಆರೈಕೆಯ ಸಮಯದಲ್ಲಿ ಕೂಡ ಶಿಶುಪ್ರಾಸಗಳು ಕಂಡುಬರುತ್ತವೆ. ಮಗು ಅತ್ತಾಗ ತಾಯಿಯು ಅಕ್ಕರೆಯಿಂದ, ಪ್ರೀತಿಯಿಂದ ಜೋಗುಳ, ಲಾಲಿಪದಗಳನ್ನು ಹಾಡುತ್ತಾಳೆ. ಮಗುವಿಗೆ ಊಟ ಮಾಡಿಸುವಾಗ ಚಂದ್ರನನ್ನು ತೋರಿಸಿ "ಚಂದ್ರಮಾಮ ಬಾ ಬಾ ಚಕ್ಕುಲಿಮಾಮಾ ಬಾ ಬಾ..." ಎಂದು ಹಾಡಿ ಮಗುವಿಗೆ ಊಟ ಮಾಡಿಸುವ ಬಗೆಯನ್ನು ಕಾಣಬಹುದು. ಅಂತಯೇ ಮಕ್ಕಳಿಗೆ ಸ್ನಾನ ಮಾಡಿಸುವ ಸಂದರ್ಭದಲ್ಲಿ "ದೂರಿ ದುಂಡಾಲಮ್ಮ... ತೆಂಗಿನಕಾಯಿ ತಂದಾಳಮ್ಮ..." ಎಂಬ ದೂರಿಪದ ಹಾಡಿ ಮಗುವನ್ನು ಮಲಗಿಸುತ್ತಾರೆ. ಪ್ರಾಸಗಳು ಹಾಸ್ಯ, ಮನೋರಂಜನೆಗಾಗಿಯೇ ಹುಟ್ಟಿಕೊಂಡವುಗಳಾದರೂ ಊಟ ವಿನೋದ, ವಿಡಂಬನೆಯಿಂದ ಕೂಡಿರುವ ಪ್ರಾಸಗಳು ಇದ್ದು ಇವು ವ್ಯಕ್ತಿಗಳ ವರ್ತನೆಗಳನ್ನು ಕುರಿತು ಅಣಕ, ವಿಡಂಬನೆ ಮಾಡುವ ಸಲುವಾಗಿಯೇ ಹುಟ್ಟಿಕೊಂಡವುಗಳಾಗಿದ್ದು ಇದಲ್ಲದೆ ಲಜ್ಜಾಸ್ಪದವಾದ 'ಅಸಂಬದ್ಧಪ್ರಾಸಗಳು' ಎಂಬ ಮತ್ತೊಂದು ಬಗೆಯ ಪ್ರಾಸವೂ ಬಳಕೆಯಲ್ಲಿರುವುದನ್ನು ಕಾಣಬಹುದಾಗಿದೆ. ಇವಲ್ಲದೆಯೇ ಮಕ್ಕಳ ಕಲಿಕೆ ಆಧಾರಿತವಾದ ಸಂಖ್ಯಾತ್ಮಕವಾದ ಪ್ರಾಸಗಳೂ ಹುಟ್ಟಿಕೊಂಡಿವೆ.

ಇವಲ್ಲದೆ ಸಾಮಾಜಿಕ ಪ್ರಜ್ಞೆಗೆ ಸಂಬಂಧಿಸಿದ ಪ್ರಾಸಗಳು ತಾಯಿಯ ನಡವಳಿಕೆ, ಹೆಣ್ಣು–ಗಂಡಿನ ಸಂಬಂಧ, ದಾಂಪತ್ಯ ಜೀವನದ ಸರಸ–ವಿರಸ ಹೀಗೆ ಹತ್ತಾರು ವಿಷಯಗಳ ಬಗೆಗೂ ಪ್ರಾಸಗಳು ಹುಟ್ಟಿಕೊಂಡಿರುವುದನ್ನು ಕಾಣಬಹುದು.

ಬಾಲ್ಯದ ಆಟಗಳು

ಮಕ್ಕಳು ತಮ್ಮ ಬಾಲ್ಯದಲ್ಲಿದ್ದಾಗ ತಮ್ಮ ಸಹಪಾಠಿಗಳ ಜೊತೆಗಿದ್ದಾಗ ಅವರ ಪ್ರೀತಿ ವಿಶ್ವಾಸವನ್ನು ಗಳಿಸಿ ಸಹಪಾಠಿಗಳು ಮಾತಾಡುವ ಭಾಷಾ ಶೈಲಿಯನ್ನು ಕಲಿಯುತ್ತಾರೆ. ತಮ್ಮದೇ

ಓರಗೆಯವರ ಜೊತೆಗೂಡಿ ಆಟದಲ್ಲಿ ಭಾಗವಹಿಸುತ್ತಾರೆ. ಮಕ್ಕಳು ಆಟವಾಡುವ ಸಂದರ್ಭದಲ್ಲಿ ತಮಗೆ ಗೊತ್ತಿಲ್ಲದೆಯೇ ಆಟಗಳೊಟ್ಟಿಗೆ ಪ್ರಾಸಗಳನ್ನೂ ಕಲಿಯುತ್ತಾರೆ. ಮಕ್ಕಳು ಪಾಠಕ್ಕಿಂತ ಹೆಚ್ಚಾಗಿ ಆಟಗಳಲ್ಲಿ ಹೆಚ್ಚು ಒಲವು ತೋರುತ್ತಾರೆ. ಒಂದು ವೇಳೆ ಪಾಠವನ್ನು ಮರೆತರೂ ಪ್ರಾಸವನ್ನು ಮರೆಯುವುದಿಲ್ಲ.

"ಕಣ್ಣೀಮುಚ್ಚೇ ಕಾಡೇಗೂಡೆ
ಉದ್ದಿನ ಮೂಟೆ ಉರುಳೇ ಹೋಯ್ತು
ನಮ್ಮಯ ಹಕ್ಕಿ ಬಿಟ್ಟೇ ಬಿಟ್ಟೇ
ನಿಮ್ಮಯ ಹಕ್ಕಿ ಹಿಡಿದುಕೊಳ್ಳಿ.."

ಈ ಪ್ರಾಸದಲ್ಲಿ ತೋರಿಕೆಗೆ ಕಾಣದ ಒಳ ಅರ್ಥವೇ ಬೇರೆ. ಈ ಪ್ರಾಸವು ಮನುಷ್ಯನ ಸಾವಿನ ಸ್ಥಿತಿಯನ್ನು ಹೇಳುವಂತದ್ದು. ಕಣ್ಣು ಮುಚ್ಚಿದ ಮೇಲೆ ಪ್ರತಿಯೊಬ್ಬರಿಗೂ ಕಾಡು ಅವರ ಗೂಡಾಗುತ್ತದೆ. ಇಲ್ಲಿ ಬಳಕೆಯಾಗುವ ಕಾಡು ಶಬ್ಧವು ಧ್ವನಿಪೂರ್ಣವಾದದ್ದು. ಇದು ಸುಡುಗಾಡನ್ನು ಸಂಕೇತಿಸುತ್ತದೆ. ಉದ್ದಿನ ಮೂಟೆ ಉರುಳುವುದು ಮನುಷ್ಯನ ಶರೀರವನ್ನು ಸೂಚಿಸುತ್ತದೆ. ಒಬ್ಬ ವ್ಯಕ್ತಿಯು ಕಣ್ಣು ಮುಚ್ಚಿದರೆ ಅವನು ಮತ್ತೆ ಚಿರನಿದ್ರೆಯಿಂದ ಎದ್ದೇಳಲಾಗದ ಸ್ಥಿತಿಗೆ ತಲುಪಿದ್ದಾನೆ. ಹಾಗೇ ಅವನ ಶರೀರವು ಕೂಡ. 'ಹಕ್ಕಿ' ಎಂದರೆ ಆತ್ಮ, ಪ್ರಾಣಪಕ್ಷಿ ಎಂಬುದಾಗಿ ಸಂಕೇತಿಸಲಾಗಿದೆ.

ನಿಮ್ಮಯ ಹಕ್ಕಿಗಳನ್ನು ಹಿಡಿದುಕೊಳ್ಳಿ ಎಂಬುದು ನಿಮ್ಮ ನಿಮ್ಮ ಆತ್ಮಗಳನ್ನು ರಕ್ಷಿಸಿಕೊಳ್ಳಿ ಎಂಬ ಅರ್ಥವಡಗಿದೆ. ಈ ಪ್ರಾಸವು ಒಂದು ಬಾಲ್ಯದ ಆಟವಾಗಿದ್ದು ಆಟವಾಡುತ್ತಲೇ ಪ್ರಾಸಗಳನ್ನು ಹುಟ್ಟುಹಾಕುತ್ತಾರೆ. 'ಪ್ರಾಸವಿಲ್ಲದೇ ಆಟವಿಲ್ಲ. ಆಟವಿಲ್ಲದೇ ಪ್ರಾಸವಿಲ್ಲ ಎಂಬಂತೆ ಇವು ಏಕಕಾಲದಲ್ಲಿ ಕಾಣಿಸಿಕೊಳ್ಳುತ್ತವೆ.' ಅಂತೆಯೇ ಅವರು ಬಿಟ್ಟು ಇವರು ಬಿಟ್ಟು ಅವರ್ಯಾರು ಇಲ್ಲಿ ಮುಖ್ಯವಾಗಿ ಪ್ರಾಸದ ಮೂಲಕವೇ ಆಟ ಪ್ರಾರಂಭವಾಗುತ್ತದೆ.

"ಐದೊಂದು ತಿರುಳೆ
ಆರುಳ್ ಮಾಡಿ
ಏಳೇಳ್ ಕುದ್ರೆ
ಎಂಟ ಕಾಯ್ ಸುಂಟಿ
ಒಂಬಣ್ಣ ತಾಳಿ
ತುಂಬಣ್ಣ ಗೋಲಿಯ"

ಎಂಬಂತೆ ಸಂಖ್ಯಾತ್ಮಕ ಪ್ರಾಸಗಳನ್ನೂ ಗುರುತಿಸಬಹುದು. ಇದು ಗೋಲಿಯಾಟದ ಸಂದರ್ಭದಲ್ಲಿ ಅಂಕಿಗಳನ್ನು ಹೇಳಿಕೊಂಡು ಈ ಪ್ರಾಸವನ್ನು ಬಳಸಿದ್ದಾರೆ. ಈ ಪ್ರಾಸಗಳು ಮಕ್ಕಳ ಎಣಿಕೆಯನ್ನು ಕಲಿಸುವ ದೃಷ್ಟಿಯಿಂದ ವಯಸ್ಕರಿಂದಲೂ ಬಾಲಕರಿಂದಲೂ ರಚಿತವಾಗಿದ್ದು ವಿಶೇಷವಾಗಿ ಒಳಾಂಗಣ ಮತ್ತು ಹೊರಾಂಗಣ ಆಟಗಳಲ್ಲಿ ಬಳಸುತ್ತಾರೆ. ಅಂತೆಯೇ

"ಒಂದು ಎರಡು
ಬಾಳಲೆ ಹರಡು
ಮೂರು ನಾಲ್ಕು
ಅನ್ನ ಹಾಕು
ಐದು ಆರು
ಬೇಳೆ ಸಾರು
ಏಳು ಎಂಟು
ಪಲ್ಯಕೆ ದಂಟು
ಒಂಬತ್ತು ಹತ್ತು
ಎಲೆ ಮುದಿರೆತ್ತು"

ಮಕ್ಕಳು ಆಟವಾಡುವ ಸಂದರ್ಭದಲ್ಲಿ ಎಲ್ಲರೂ ಒಟ್ಟಿಗೇ ಸೇರಿಕೊಂಡು ಅಡುಗೆ ಮಾಡಿ ಎಲ್ಲರೂ ಜೊತೆಯಲ್ಲಿ ಊಟಕ್ಕೆ ಕೂತುಕೊಳ್ಳುವ ಸಂದರ್ಭದಲ್ಲಿ ಮಕ್ಕಳು ಅಡುಗೆ ಮಾಡಿದ ಬಗೆಯನ್ನು ಹೇಳಿರಬೇಕು ಎಂದು ಭಾಸವಾಗುತ್ತದೆ. ಒಟ್ಟಾರೆಯಾಗಿ ಆಟವನ್ನು ಅಡುವ ಸಂದರ್ಭದಲ್ಲಿ ಒಂದು ಸಂಸಾರದ ಚಿತ್ರಣವನ್ನು ಕೊಡುತ್ತದೆ. ಒಂದು ಸಂಸಾರದಲ್ಲಿದ್ದಾಗ ಎಲ್ಲರೂ ಹೇಗೆ ಒಟ್ಟಿಗೇ ಸೇರಿಕೊಂಡು ಅಡುಗೆ ಮಾಡಿ ಬಂದವರಿಗೂ ಊಟ ಬಡಿಸಿ. ನಂತರ ತಮ್ಮ

ಮನೆಯವರೆಲ್ಲರೂ ಒಟ್ಟಿಗೇ ಕುಳಿತು ಊಟವನ್ನು ಮಾಡುವ ಸಂಸಾರದ ಚಿತ್ರಣವನ್ನು ಕೊಡುತ್ತಿದೆ. ಈ ಬಗೆಯ ಪ್ರಾಸವು ಅಂಕಿಗಳನ್ನು ಕಲಿಯುವುದರ ಜೊತೆಗೆ ಮಕ್ಕಳು ಒಂದು ಅವಿಭಕ್ತ ಕುಟುಂಬದಲ್ಲಿದ್ದಾಗ ಮನೆಯ ಸದಸ್ಯರೊಂದಿಗೆ ಕೂಡಿಕೊಂಡು ರುಚಿರುಚಿಯಾದ ಅಡುಗೆ ಮಾಡಿ ಏಳು–ಎಂಟು ತರದ ತರಕಾರಿಗಳು ಹಾಕಿ ಅದನ್ನು ಪಲ್ಯವಾಗಿ ತಯಾರಿಸಿದ ನಂತರ ಅನ್ನ ಬೇಳೆ ಸಾರು ಮಾಡಿ ಅಡುಗೆ ಪೂರ್ತಿಯಾಗಿ ಮಾಡಿದ ನಂತರ ಎಲ್ಲರೂ ಒಟ್ಟಿಗೇ ಕುಳಿತು ಬಾಳೆ ಎಲೆಯನ್ನು ಹಾಕಿಕೊಂಡು ಊಟಕ್ಕೆ ಕುಳಿತು ಎಲ್ಲರು ಆಹಾರ ಸೇವಿಸುತ್ತಾರೆ. ಇದರಿಂದ ಮಕ್ಕಳು ಸಹಬಾಳ್ವೆ ಜೀವನವನ್ನು ನಡೆಸುವ ಕ್ರಮವನ್ನು ಕಲಿಯುತ್ತಾರೆ. ಅಂತೆಯೇ "ಕಪ್ಪೆ ಕಪ್ಪೆ ಕಟ್ಟು ಬನ್ನಿಕಪ್ಪೆ ಗೂಡಕಟ್ಟು ಬನ್ನಿ" ಎಂಬಪ್ರಾಸದಲ್ಲಿ ಜೋರಾಗಿ ಮಳೆಯಾದಾಗ ಬೀದಿಯ ಪಕ್ಕದಲ್ಲಿ ಮನೆಗಳ ಮುಂದೆ ನೀರು ಹರಿದು ಮರಳು ಬರುತ್ತದೆ. ಆ ಮರಳನ್ನು ತೆಂಗಿನಕಾಯಿ ಕಂಟದಲ್ಲಿ ತುಂಬಿ ಕಂಟವನ್ನು ಮಗುಚಿ ಕಂಟದಲ್ಲಿ ತುಂಬಿದ ಮರಳು ಇಲ್ಲಿಯ ಆಕಾರವನ್ನು ಪಡೆದುಕೊಳ್ಳುತ್ತದೆ. ಆಗ ಅದನ್ನು ತಿನ್ನಲು ಸ್ನೇಹಿತರನ್ನು ಕರೆವ ಪರಿ ಇದಾಗಿದೆ.

"ರತ್ತೋ ರತ್ತೋ ರಾಯನ ಮಗಳೇ
ಬಿತ್ತೋ ಬಿತ್ತೋ ಭೀಮನ ಮಗಳೇ
ಹದಿನಾರೆಮ್ಮೆ ಕಾಯಿಸಲಾರೆ ಕರೆಯಲಾರೆ
ಕುಕ್ಕನೆ ಕುಕ್ಕೋ ಕೂರೇಬಿಸ್ವೀ"

ಎಂಬ ಈ ಪ್ರಾಸವು ಕ್ರಿಯಾತ್ಮಕ ಆಟ ಸುಮಾರು ಎಂಟು ಹತ್ತು ಹೆಣ್ಣು ಮಕ್ಕಳು ಅಂಗಳದಲ್ಲಿ ಸೇರಿ ಇಬ್ಬರನ್ನು ಹೊರತುಪಡಿಸಿ ಉಳಿದೆಲ್ಲಾ ಹೆಣ್ಣು ಮಕ್ಕಳು ಸಾಲಾಗಿ ನಿಂತುಕೊಳ್ಳುತ್ತಾರೆ. ಇಬ್ಬರು ತಮ್ಮೆರಡು ಕೈಗಳನ್ನು ಕಟ್ಟಿಕೊಂಡು ಸಾಲಾಗಿ ನಿಂತುಕೊಂಡು

"ಟೊಪ್ಪಿ ಬೇಕೆ ಟೊಪ್ಪಿ
ಎಂಥಾ ಟೊಪ್ಪಿ
ಚೆನ್ನದ ಟೊಪ್ಪಿ
ಎಷ್ಟು ರೂಪಾಯಿ?
ಸಾವಿರ ರೂಪಾಯಿ
ಯಾರಿಗೆ ಬೇಕು
ಅವರಿಗೆ ಹಾಕು"

ಎಂಬ ಈ ಪ್ರಾಸವನ್ನು ಸಾಮಾನ್ಯವಾಗಿ ಅಂಗನವಾಡಿಗೆ ಹೋಗುವ ಹೆಣ್ಣು ಮಕ್ಕಳ ಬಾಯಲ್ಲಿ ಹೆಚ್ಚಾಗಿ ಕೇಳುತ್ತೇವೆ. ಮಕ್ಕಳನ್ನು ವೃತ್ತಾಕಾರವಾಗಿ ಕೂರಿಸಿ ಹೆಚ್ಚು ಕ್ರಿಯಾಶೀಲವಾಗಿ ವರ್ತಿಸುತ್ತಾ ಆಟವನ್ನು ಆಡುತ್ತಾ ಪ್ರಾಸವನ್ನು ಹೇಳುತ್ತಾರೆ.

ವಿಡಂಬನೆ ಅಥವಾ ಅಣಕ

ಈ ಪ್ರಾಸಗಳು ಮಕ್ಕಳ ಬುದ್ಧಿಶಕ್ತಿ ಹಾಗೂ ಜಾಣೆಯನ್ನು ತೋರಿಸುತ್ತವೆ. ವಿಡಂಬನೆಯ ಪ್ರಾಸಗಳು ಸಾಮಾನ್ಯವಾಗಿ ಮನೆಯ ವಾತಾವರಣದಲ್ಲಿ ಹುಟ್ಟಿಕೊಳ್ಳುವುದಿಲ್ಲ. ಇದೆ ವಿಶೇಷವಾಗಿ ಶಾಲೆಯ ವಾತಾವರಣ, ಆಟದ ಸಂದರ್ಭದಲ್ಲಿ ಹುಟ್ಟಿಕೊಳ್ಳುತ್ತವೆ. ಗೊಣ್ಣೆ ಸುರಿಸುವವನನ್ನು, ಜೊಲ್ಲು ಸುರಿಸುವವನನ್ನು ಅಣಕಿಸಿ, ಹಾಗೇ ಕುರುಡ, ಕುಂಟ, ಕಿವುಡ, ಬಿಳಿಯ ಕೆಂಪ ಇವರೇ ಇಂತಹ ಪ್ರಾಸಗಳಿಗೆ ಸಾಮಾಗ್ರಿ ತಿಂಡಿ ಹಂಚಿಕೆಯಲ್ಲಿನ ವ್ಯತ್ಯಾಸ, ಆಟದಲ್ಲಿ ಸೋತಾಗ ಇಂತಹ ಪ್ರಾಸಗಳು ಹುಟ್ಟುತ್ತವೆ. ಅಣಕ ಮತ್ತು ಲೇವಡಿಯೇ ಇಲ್ಲಿ ಪ್ರಧಾನ.

"ದಡಿಯಾ ದಡಿಯಾ ದಪ್ಪ
ಹೀರೆಕಾಯಿ ತುಪ್ಪ
ನಿಮ್ಮಪ್ಪ ಸತ್ತೋದ್ರೆ ನಾನೇ ನಿಮ್ಮಪ್ಪ"

ಎಂದು ದಪ್ಪಗಿರುವ ವ್ಯಕ್ತಿ ಕಣ್ಮುಂದೆ ಬಂದರೆ ಅಣಕ ಮಾಡಿ ಹಾಸ್ಯದೊಟ್ಟಿಗೆ ರೇಗಿಸುತ್ತಾ ವಿಡಂಬನೆ ಮಾಡುವುದನ್ನು ಕಾಣಬಹುದು. ಹಾಗೆಯೇ ವಯಸ್ಸಿಗೆ ಮೀರಿದ ದೈಹಿಕ ಬೆಳವಣಿಗೆಯನ್ನು ಮತ್ತು ಅವನು ಆಹಾರ ತಿನ್ನುವ ಕ್ರಮವನ್ನು ಈ ಪ್ರಾಸದಲ್ಲಿ ವ್ಯಂಗ್ಯವಾಗಿ ಕಟ್ಟಿಕೊಡಲಾಗಿದೆ "ಗುಂಡಾಡಿ ಗುಂಡ ಎಂಟು ಲಾಡು ತಿಂದ, ಹೊಟ್ಟೆ ನೋವು ಅಂದ,

ಇನ್ನು ಬೇಕು ಅಂದ ಅಪ್ಪದೊಣ್ಣೆ ತಂದ ಕೈಕಟ್ಟಿ ಬಾಯಿಮುಚ್ಚು ಅಂದ" ಹಾಗೆಯೇ "ಅವನೇ ಡುಮ್ಮಣ್ಣಾಚಾರಿ, ಕೈಕಾಲು ಹಿಂದೆ, ಹೊಟ್ಟೆ ಮಾತ್ರ ಮುಂದೆ." ಹಾಗೆಯೇ ಕಾಲು ಊನವಾದವನನ್ನು ವ್ಯಂಗ್ಯಮಾಡುವ ಪರಿ ವಿಶೇಷ

"ನಮ್ಮೂರಿಗೆ ಬಂದಿರೋದು ಕೆಟ್ಟಗಾಲ,
ನೆಟ್ಟಗೆ ಹಾಕು ನಿನ್ನ ಸೊತ್ತಗಾಲ";

ಹಾಗೆ ಆಟವಾಡುವ ಗುಂಪಿನಲ್ಲಿ ಆಯ್ಕೆ ಮಾಡಿಕೊಳುವ ಸಂದರ್ಭದಲ್ಲೋ ಅಥವಾ ಊಸಿದವರನು ಕಂಡುಹಿಡಿಯಲೋ "ಅವಲಕ್ಕಿ ಪವಲಕ್ಕಿ ಕಾಂಚಣ ಮಿಣಿ ಮಿಣಿ ಕೊಯ್ಯ ಕೊಟಾರ್".ಇಲ್ಲಿ ಕೊಟಾರ್ ಎಂಬ ಶಬ್ದ ಯಾರ ಮುಂದೆ ಬಂದು ನಿಲ್ಲುವುದೋ ಅವರೇ ಆಟದಲ್ಲಿ ಔಟಾದವರು, ಊಸಿದವರು ಆಗುತ್ತಾರೆ.

ಮನೋರಂಜನೆ

ಶಿಶುಪ್ರಾಸಗಳು ಮನೋರಂಜನೆಗಾಗಿ ಮತ್ತು ನೆನಪಿನ ಶಕ್ತಿಯ ವೃದ್ಧಿಗಾಗಿ ಬಾಲ್ಯಾವಸ್ಥೆಯಲ್ಲಿ ಹಾಡಲು ಸೃಷ್ಟಿಸಿದವುಗಳು.

"ಜಯಮ್ಮ ಜಯಮ್ಮ ಜಾಕೇಟು
ಜಯಮ್ಮನ ಗಂಡ ರಾಕೇಟು
ಆಡೋದೆಲ್ಲ ಇಸ್ಪೀಟು
ಸೇಯೋದೆಲ್ಲ ಸಿಗರೇಟು".

ಈ ಪ್ರಾಸದಲ್ಲಿ ಜಯಮ್ಮನ ಗಂಡ ದುಶ್ಚಟಕ್ಕೆ ಒಳಗಾಗಿರುವುದನ್ನು ಗಮನಿಸಬಹುದು."ಆ ನಾಮ ಈ ನಾಮ ತಿರುಪತಿ ಮೂರ್ನಾಮ" ದಾಸಯ್ಯನನ್ನು ಕಂಡಾಗ ಅಥವಾ ನಾಮ ಹಾಕಿಕೊಂಡಿರುವವರನ್ನು ಕಂಡಾಗ ಈ ಪದವನ್ನು ಹಾಸ್ಯಕ್ಕಾಗಿ ಹೇಳುತ್ತಾರೆ. ಇಲ್ಲಿ ತಿರುಪತಿಗೆ ಹೋಗುವವರು ಸಾಮಾನ್ಯವಾಗಿ ಹಣೆಗೆ ಕೆಂಪು ಬಣ್ಣದ ನಾಮವನ್ನು ಎರಡು ಕಡೆಗೆ ಹಾಕಿ, ಮಧ್ಯದಲ್ಲಿ ಬಿಳಿನಾಮವನ್ನು ಹಾಕಿಕೊಂಡು ಹೋಗುತ್ತಿರುತ್ತಾರೆ. ಇದನ್ನು ನೋಡಿದವರ ಕಣ್ಣಿಗೆಹಾಸ್ಯಭರಿತವಾಗಿಯು ಕಂಡುಬರುತ್ತದೆ.

ಆಚರಣೆ

ಮಕ್ಕಳು ಸಂಪ್ರದಾಯ ಆಚರಣೆಗಳನ್ನು ಕ್ರಮಬದ್ಧವಾಗಿ ಅನುಸರಿಸುತ್ತಾರೆ. ತಮ್ಮ ಸುತ್ತಲಿನ ಸಾಮಾಜಿಕ ಜೀವನವನ್ನು ಕುರಿತು ವ್ಯಕ್ತಪಡಿಸುವ ಅಭಿಪ್ರಾಯಗಳು ವಿಶಿಷ್ಟಪೂರ್ಣವಾದವು. ಮಾನವ ಸಂಘಜೀವಿ, ಕೂಡಿಬಾಳಲು ಸುವ್ಯವಸ್ಥಿತ ಜೀವನ ನಡೆಸುವ ದೃಷ್ಟಿಯಿಂದ ಸಂಸ್ಥೆಗಳನ್ನು ಕಟ್ಟಿ ಕೊಂಡ ಸಮಾಜ ಜೀವಿಯಾದ ಮಾನವನಷ್ಟೇ ಪ್ರಾಚೀನವಾದುದು. ಸಮಾಜದ ಮಾನವ ತಾನೇ ಕಟ್ಟಿಕೊಂಡ ಸಂಘಸಂಸ್ಥೆ ಬೆಳೆಸಿಕೊಂಡು ಬಂದ ಸಂಪ್ರದಾಯ, ಆಚಾರ ಪದ್ಧತಿ ಮತ್ತು ನಂಬಿಕೆ ಇವುಗಳೊಡನೆ ಹೇಗೆ ವ್ಯವಹರಿಸುತ್ತಾನೆಂಬುದು ಅವನ ಸಾಮಾಜಿಕ ನಡವಳಿಕೆಯಾಗುತ್ತದೆ.

"ಚಂದ ಮಾಮ ಬಾಬಾ
ಚಕ್ಕುಲಿ ಮಾಮ ಬಾಬಾ"

ತಾಯಿಯು ಮಗುವಿಗೆ ಊಟವನ್ನು ಮಾಡಿಸುವ ಸಂದರ್ಭದಲ್ಲಿ ಕೈತುತ್ತು ತಿನ್ನಿಸುವಾಗ ಮಗುವಿಗೆ ಚಂದ್ರನನ್ನು ತೋರಿಸಿ ಊಟಮಾಡಿಸುವ ಸಂದರ್ಭದಲ್ಲಿ ಮಗುವಿಗೆ ಚಂದ್ರನನ್ನು ತೋರಿಸಿ ಊಟಮಾಡುವ ವೇಳೆಯಲ್ಲಿ ಸಾಮಾನ್ಯವಾಗಿ ಮಕ್ಕಳು ಹಠ ಮಾಡುತ್ತಾರೆ. ಹಾಗಾಗಿ ಮಕ್ಕಳನ್ನು ಆಕರ್ಷಿಸಲು ಆಕಾಶದಲ್ಲಿರುವ ಚಂದ್ರನನ್ನು ತೋರಿಸಿ "ಚಂದ ಮಾಮಾ ಬಾಬಾ" ಎಂದು ಕೈತುತ್ತನ್ನು ಮಗುವಿಗೆ ತಿನ್ನಿಸುತ್ತಾರೆ. ಹೀಗೆ ತಾಯಿಯು ಮಗುವಿಗೆ ಆಕರ್ಷಿಸುತ್ತಾ ಪೂರ್ತಿ ಊಟವನ್ನು ಆಗಬೇಕೆಂದು ಚಂದ್ರನಿಗೂ ಮಗುವಿಗೂ ಅವಿನಾಭಾವ ಸಂಬಂಧವನ್ನು ಹಿರಿಯರು ಕಟ್ಟಿದ್ದಾರೆ.

ಹೀಗೆ ಜನಪದರ ಮನಸನ್ನು ಅರಿಯಲು ಶಿಶುಪ್ರಾಸಗಳು ಕಾರಣವಾಗುತ್ತವೆ. ಆ ಮೂಲಕ ಮಕ್ಕಳ ಮಾನಸಿಕ ಮತ್ತು ಬೌದ್ಧಿಕ ಬೆಳವಣಿಗೆಗೆ ಪೂರಕವಾಗಿ ಬಹುಪಯೋಗಿಯಾಗಿ ನಿಲ್ಲುತ್ತವೆ.

ಪರಾಮರ್ಶನ ಗ್ರಂಥಗಳು

- ಬೋರೇಗೌಡ ಚಿಕ್ಕಮರಳಿ. (1993). *ಗ್ರಾಮಾಂತರ ಶಿಶುಪ್ರಾಸಗಳು.* ಅನಿಕೇತನ.
- ದಾಸೇಗೌಡ, ಜಿ.ವಿ. (2006). *ಕರ್ನಾಟಕ ಶಿಶುಪ್ರಾಸಗಳು.* ಚೇತನ್ ಬುಕ್ ಹೌಸ್.
- ಶ್ರೀಕಂಠ ಕೂಡಿಗೆ. (1981). *ಜನಪದ ಶಿಶುಪ್ರಾಸಗಳು.* ಕನ್ನಡ ಸಾಹಿತ್ಯ ಪರಿಷತ್ತು.
- ಸುಶೀಲಾ ಹೊನ್ನೇಗೌಡ. (1979). *ಜನಪದ ಮಕ್ಕಳ ಪದಗಳು.* ಶರತ್ ಪ್ರಕಾಶನ.